ರಾಜ್ಯದಲ್ಲಿ ಚಿರತೆಯ ಹಾವಳಿ

೪೪೩. ಶ್ರೀಮತಿ. ಲೀಲಾದೇವಿ ಆರ್. ಪ್ರಸಾದ್ (ಅಧಣಿ) — ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

೧. ರಾಜ್ಯದ ನಾನಾ ಭಾಗಗಳಲ್ಲಿ ಚಿರತೆಯ ಹಾವಳಿ ಕಂಡುಬಂದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

೨. ಅಥಣಿ ತಾಲ್ಲೂಕಿನ ಕಕಮರಿ ಗ್ರಾಮದಲ್ಲಿ ಎರಡು ಚಿರತೆಗಳು ಧಾಳಿ ಮಾಡಿ ಹಲವರಿಗೆ ಗಾಯವುಂಟು ಮಾಡಿರುವುದು ಮತ್ತು ಒಂದು ಚಿರತೆಯನ್ನು ಗ್ರಾಮಸ್ಥರೇ ಕೊಂದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

೩. ಈ ಬಗ್ಗೆ ಹಾನಿಗೊಳಗಾದವರಿಗೆ ಪರಿಹಾರ ಕೊಡಲಾಗುವುದೇ ?

ಶ್ರೀ ಜೀವಿಜಯ (ರಾಜ್ಯ ಅರಣ್ಯ ಮಂತ್ರಿಗಳು).—

೧. ಗ್ರಾಮಗಳಿಗೆ ಚಿರತೆಗಳು ಬಂದ ಕೆಲವು ಸಂದರ್ಭಗಳು ಸರ್ಕಾರದ ಗಮನಕ್ಕೆ ಬಂದಿದೆ.

೨. ಒಂದು ಚಿರತೆ ಮಹಾರಾಷ್ಟ್ರದ ಕಡೆಯಿಂದ ಕಕಮರಿ ಹಾಗೂ ಕಟ್ಟಲಗಿ ಗ್ರಾಮಕ್ಕೆ ಬಂದು ಜನರಿಗೆ ಸಣ್ಣ ಪುಟ್ಟ ಗಾಯ ಗೊಳಿಸಿದೆ. ಗ್ರಾಮಸ್ಥರ ಕೋರಿಕೆಯ ಮೇರೆಗೆ ಆಗಲಿ ಫೋಲೀಸ್ ಇಲಾಖೆಯ ಉಪನಿರೀಕ್ಷಕರು ತಮ್ಮ ಸಿಬ್ಬಂದಿಯೊಡನೆ ಬಂದು ಚಿರತೆಯನ್ನು ಕೊಂದಿರುತ್ತಾರೆ

೩. ಪರಿಹಾರ ಕೋರಿಕೆ ಪ್ರಕರಣಗಳು ಸಾರ್ವಜನಿಕರಿಂದ ಇದುವರೆಗೆ ಬಂದಿಲ್ಲ. ವಿಚಾರಣೆ ಹಾಗೂ ಮುಂದಿನ ತನಿಖೆ ನಡೆಯುತ್ತಿದೆ. ಪರಿಹಾರಕ್ಕೆ ಕೋರಿಕೆ ಬಂದಲ್ಲಿ ಕಾನೂನಿನಂತೆ ಕೊಡಲಾಗುವುದು.

ಭಟ್ಕಳ ಕ್ಷೇತ್ರದಲ್ಲಿ ಸಣ್ಣ ನೀರಾವರಿ ಯೋಜನೆ.

೩೩೫. ಶ್ರೀ ಆರ್. ಎನ್. ನಾಯ್ಕ (ಭಟ್ಕಳ ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).— ಈಕೆಳಕಂಡ ಪ್ರಶ್ನೆಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ೧೯೮೩-೮೫ನೇ ಸಾಲಿನಲ್ಲಿ ಭಟ್ಕಳ ಕ್ಷೇತ್ರದ ಎಷ್ಟು ಕಡೆಗಳಲ್ಲಿ ಸಣ್ಣ ನೀರಾವರಿ ಯೋಜನೆಯನ್ನು ಕೈಗೆತ್ತಿಕೊಳ್ಳುವುದರ ಬಗ್ಗೆ ಮಂಜೂರಿ ದೊರಕಿತ್ತು. ಆ ಪೈಕಿ ನಿರ್ವಹಿಸಿದ ಕಾಮಗಾರಿಗಳ ಸಂಖ್ಯೆ ಎಷ್ಟು ?

ಆ) ಎಷ್ಟು ಕಡೆ ಕೆಲಸ ಪ್ರಾರಂಭವಾಗಿದೆ, ಉಳಿದ ಕೆಲಸಗಳು ಯಾವಾಗ ಪ್ರಾರಂಭವಾಗುತ್ತದೆ

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಮಂಜೂರಾದ ಕಾಮಗಾರಿಗಳು — ೮
ಪ್ರಗತಿಯಲ್ಲಿರುವ ಕಾಮಗಾರಿಗಳು — ೭

ಆ) ಪ್ರಾರಂಭವಾಗಿರುವ ಕಾಮಗಾರಿಗಳು — ೭
ಉಳಿದ ಒಂದು ಕಾಮಗಾರಿಯನ್ನು ಮಳೆಗಾಲ ಕಳೆದ ನಂತರ ಪ್ರಾರಂಭಿಸಲಾಗುವುದು.

ಕೊಡಗು ಜಿಲ್ಲೆಯ ಅರಣ್ಯ ರಕ್ಷಕರ ಸೇವೆಯನ್ನು ಕ್ರಮಗೊಳಿಸುವುದು

೭೭೧. ಶ್ರೀ ಕುಶಾಲ(ಸುಳ್ಯ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಕೊಡಗು ಪೃತ್ತದ ಅರಣ್ಯ ಇಲಾಖೆಯಲ್ಲಿ ಎಷ್ಟು ಜನ ಅರಣ್ಯ ರಕ್ಷಕರು ತಮ್ಮ ಹುದ್ದೆಯಲ್ಲಿ ಪ್ರಭಾರಧಾರಕವಾಗಿ ಸೇವೆ ಸಲ್ಲಿಸುತ್ತಿರುವವರು ಹಾಗೂ ಯಾವಾಗಿನಿಂದ ;

ಆ) ಈ ಅರಣ್ಯ ರಕ್ಷಕರನ್ನು ಈ ವರೆಗೂ ಪ್ರಭಾರಧಾರಕವಾಗಿದೆಯೇ ಸೇವೆಯಲ್ಲಿ ಮುಂದುವರಿಸಲು ಕಾರಣವೇನು ?